# ಮಂಟೇಸ್ವಾಮಿ ಕಾವ್ಯದಲ್ಲಿ ಶಾಕ್ತ-ಶೈವಗಳ ಸಂಘರ್ಷ

**ಮಾರುತಿ ಮಂಜಪ್ಪ ಚಲವಾದಿ**

ಸ್ನಾತಕೋತ್ತರ ವಿದ್ಯಾರ್ಥಿ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

**Received:21/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788714**

## ABSTRACT:

ಶ್ರಮಣ ಧಾರೆಯು ಈ ನೆಲದ ಅತಿಪುರಾತನವಾದ ವಿಚಾರಧಾರೆ. ಸರ್ವ-ಸಾಮರಸ್ಯಮಯಿಯಾದ ಈ ಧಾರೆ ನಾಡಿನುದ್ದಗಲಕ್ಕೂ ವಿಸ್ತರಿಸಿತ್ತು. ಕಾಲ-ಪಲ್ಲಟದಿಂದಾಗಿ ಬಹುತ್ವವನ್ನು ಕೊಲ್ಲುವ ಏಕತ್ವದ ವಲಸೆ ಧಾರೆ ಇಲ್ಲಿನ ಸಮತೆಯೊಳಗೆ ಅಸಮತೆಯ ವಿಷಬೀಜ ಬಿತ್ತಿ ತನ್ನ ಕಾರ್ಯವನ್ನು ಸಾಧು ಮಾಡಿಕೊಂಡಿತು. ಈ ವಿಷಬೀಜ ಮುಂದೆ ಗಿಡವಾಗಿ, ಮರವಾಗಿ ಎಲ್ಲೆಡೆಯು ಹಬ್ಬಿ ವಿಷಲೀನವಾಗುವ ಹೊತ್ತಿನಲ್ಲಿ ವಿಷಕಂಠರಾಗಿ ಬುದ್ಧ, ನಾಗಾರ್ಜುನ, ಸರಹಪಾದ, ಚಾರ್ವಾಕ, ಮುಂದೆ ಕನ್ನಡ ನಾಡಿನಲ್ಲಿ ಇದಕ್ಕೆ ವಚನ ಚಳವಳಿ ಕೈಜೋಡಿಸಿ ಬುಡ ಸಮೇತ ಕಿತ್ತೊಗೆಯುವ ಕಾರ್ಯ ಕೈಗೊಂಡರು. ವಿಷಪ್ರೇರಿತ ವೈದಿಕ ಚಿಂತನೆಯನ್ನು ಬಗ್ಗುಬಡಿಯಲು ಮಧ್ಯಕಾಲೀನ ಸಂದರ್ಭದಲ್ಲಿ ಅನೇಕ ತಾಂತ್ರಿಕರು ಬೀದಿಗಿಳಿದರು. ಅಂತಹ ಮಹತ್ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದವನು ಮಂಟೇಸ್ವಾಮಿ. ಅವೈದಿಕದೊಳಗುದಿಸುತ್ತಿದ್ದ ವೈದಿಕವನ್ನು ಪ್ರಖರವಾಗಿ ಭಂಜಿಸಿದವನು. ಅವನ ಕ್ರಾಂತಿಗಳೆ ಜನಪದರ ಕೊರಳೊಳಗೆ ಹಾಡಾಗಿ, ಕತೆಯಾಗಿ ರೂಪಿತಗೊಂಡು ಇಂದು ಮಂಟೇಸ್ವಾಮಿಕಾವ್ಯವೆಂದು ಮಹಾಕಾವ್ಯದ ಸ್ಥಾನವನ್ನಲಂಕರಿಸಿವೆ. ತಾಂತ್ರಿಕ ಪಂಥದೊಳಗೆ ಇದ್ದ ಅನೇಕ ಸಂಘರ್ಷಗಳನ್ನು ಮಂಟೇಸ್ವಾಮಿಕಾವ್ಯ ತೆರೆದಿಟ್ಟಿದೆ. ಅಂತಹ ಬಹುಮುಖ್ಯ ಸಂಘರ್ಷಗಳಲ್ಲೊಂದು ಶಾಕ್ತ-ಶೈವದ ಸಂಘರ್ಷ.

## KEYWORDS:

ಮಂಟೇಸ್ವಾಮಿ, ಸಿದ್ಧಪ್ಪಾಜಿ, ಆದಿಶಕ್ತಿ, ಕುಲುಮೆ ಕಾಳಮ್ಮ, ಮೂಡುಮಾರಿ, ತೆಂಕುಮಾರಿ, ಪಡುವಕಾಳಿ, ಗಂಡಾಳ್ವಿಕೆ, ಮುಟ್ಟು-ತಟ್ಟು.

ಶೈವಪರಂಪರೆಯ ಇತಿಹಾಸ ಕ್ರಿಸ್ತಪೂರ್ವದ ಸಿಂಧೂ ನಾಗರಿಕತೆಯಲ್ಲೇ ಕಾಣಿಸಿಕೊಳ್ಳುತ್ತದೆ. ಅಲ್ಲಿ ಕಾಣಿಸಿಕೊಳ್ಳುವ ಪಶುಪತಿ ಮತ್ತು ಮಾತೃದೇವತೆಯ ಆರಾಧನೆ ಇದಕ್ಕೆ ಪೂರಕ. ಶೈವ ವಿಚಾರಧಾರೆ ಹಾಗೂ ತಾತ್ವಿಕತೆಯಲ್ಲಿ ಹಲವು ತಾಂತ್ರಿಕ ಪಂಥಗಳು ಗರ್ಭೀಕರಿಸಿಕೊಂಡಿವೆ. ವೈದಿಕದ ಕಟ್ಟುಪಾಡುಗಳನ್ನು ಮೆಟ್ಟಿನಿಂತು ತಾಂತ್ರಿಕ ಪಂಥಗಳು ಹೊಸ ಬಗೆಯದಾದ ದಾರ್ಶನಿಕತೆಯನ್ನು

ಕಟ್ಟಿಕೊಂಡಿವೆ. ಬಹುತೇಕವಾಗಿ ತಮ್ಮ ಜೀವನವನ್ನು ಸಾಮಾಜಿಕಸೇವೆಯಲ್ಲಿ ತೊಡಗಿಸಿಕೊಂಡ ಇವು ಕ್ರಿಸ್ತಶಕದ ದಿನಗಳಲ್ಲಿ ರಾಜಕೀಯ ಪ್ರಾಬಲ್ಯವನ್ನು ಸಾಧಿಸಿರುವುದರ ಕುರಿತು ಚರಿತ್ರೆ ಬೆಳಕು ಚೆಲ್ಲುತ್ತದೆ. ಶೈವದ ಪಂಥಗಳಲ್ಲಿ ಪ್ರಮುಖವಾಗಿ 'ಕಾಳಮುಖ', 'ಕಾಪಾಲಿಕ', 'ಪಾಶುಪಥ', 'ಲಕುಲೀಶ', 'ಸಿದ್ಧ', 'ನಾಥ'ದ ಜೊತೆ ಜೊತೆಗೆ 'ಶಾಕ್ತ ಪಂಥ'ವೆಂಬುದು ಬೆಳೆದು ಬಂದಿದೆ. ಶೈವ ಮತ್ತದರ ಜನಿತ ಪಂಥಗಳು ಕೂಡ ಸ್ತ್ರೀ ನಿರಾಕರಣೆಯನ್ನು ಮಾಡಿದಾಗ 'ಶಾಕ್ತಪಂಥ' ಹುಟ್ಟಿಕೊಂಡಿದೆ. ಶಾಕ್ತವೆಂಬುದು 'ಶಕ್ತಿ'ಯನ್ನು ಅಂದರೆ 'ಹೆಣ್ಣ'ನ್ನು ಪ್ರಧಾನವಾಗಿರಿಸಿಕೊಂಡ ಪ್ರಮುಖ ಪಂಥವಾಗಿದೆ. ಈವರೆಗಿನ ಪಂಥಗಳಲ್ಲಿ ಬಹುತೇಕವಾಗಿ ಕೇವಲ ಪುರುಷರು ಮಾತ್ರ ದಾರ್ಶನಿಕರಾಗಿ ಕಾಣಿಸಿಕೊಂಡಿದ್ದರು. ಇದಕ್ಕೆ ಬಂಡಾಯವೆಂಬಂತೆ ಶಾಕ್ತಪಂಥ ಇತರ ಶೈವ ಪಂಥಗಳೊಂದಿಗೆ ಸಂಘರ್ಷದ ನಡುವೆ ಬೆಳದು ಬಂದಿತು. ಏಕೆಂದರೆ ಅವುಗಳೆಲ್ಲ ಸ್ತ್ರೀಯರನ್ನು ಮಡಿ, ಮೈಲಿಗೆ ನೆಪದಲ್ಲಿ ಹೊರಗಿರಿಸುವ ಹುನ್ನಾರಗಳನ್ನು ನಡೆಸಿದ್ದವು. ಮಾತೃಮೂಲೀಯವಾಗಿ ಸ್ಥಾಪಿತಗೊಂಡ ಶಾಕ್ತಪಂಥ ಸಂಘರ್ಷಗಳ ಜೊತೆಗೆಯೇ ತನ್ನನ್ನು ರೂಪಿಸಿಕೊಂಡಿತು. ಅಂತಹದೇ ಶೈವ ಮತ್ತು ಶಾಕ್ತದ ಸಂಘರ್ಷ ಮಂಟೇಸ್ವಾಮಿ ಕಾವ್ಯದಲ್ಲೂ ಹರಿದು ಬಂದಿದೆ.

ಮಂಟೇಸ್ವಾಮಿ ಕಾವ್ಯದಲ್ಲಿ 'ಸಿದ್ಧ' ಮತ್ತು 'ನಾಥ'ಪಂಥಗಳಲ್ಲಿ ಗುರುತಿಸಿಕೊಳ್ಳುವ ಮಂಟೇಸ್ವಾಮಿಯೇ ಕೇಂದ್ರವಾಗಿರುವುದರಿಂದ ಶಾಕ್ತಪಂಥ ಇಲ್ಲಿ ಸಂಘರ್ಷವೊಡ್ಡಿದಾಗಲೂ ದಮನಗೊಂಡು ಅಧೀನವಾಗಬೇಕಾಗಿದೆ. ಮಂಟೇಸ್ವಾಮಿ, ಸಿದ್ಧಪ್ಪಾಜಿ, ರಾಚಾಪ್ಪಾಜಿಯಂತ ಪಾತ್ರಗಳ ಮೂಲಕ 'ಪುರುಷಧಾರ್ಷ್ಟ್ಯ' ಕಾವ್ಯಪೂರ್ತಿ ವ್ಯಕ್ತಗೊಳ್ಳುತ್ತದೆ. ಸೃಷ್ಟಿಯ ಶಕ್ತಿಯನ್ನು ಮಾತೃಮೂಲೀಯವಾಗಿ ನೋಡುವಾಗ ಕಾವ್ಯದಲ್ಲಿ ಇದಕ್ಕೆ ಭಿನ್ನವಾಗಿ ಮಂಟೇಸ್ವಾಮಿ ಎಂಬ ಪುರುಷ ಪಾತ್ರ ಸೃಷ್ಟಿಯ ಮೂಲವಾಗುತ್ತಾನೆ. ಇದು ಪುರುಷ ಚರಿತ್ರೆಯ ಹುನ್ನಾರವು ಹೌದು. ಇಲ್ಲಿ ಜಗತ್ತನ್ನೆಲ್ಲಾ ಅವನೆ ಸೃಷ್ಟಿಸುತ್ತಾನೆ. 'ಜಗತ್ತು ಸೃಷ್ಟಿಯ ಸಾಲಿ'ನಲ್ಲಿ ಜನಪದವೂ ಕೂಡ ಸ್ತ್ರೀಯನ್ನು ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಕಂಡಿರುವು ಸ್ಪಷ್ಟಗೊಳ್ಳುತ್ತದೆ. ಪೂರಕವೆಂಬಂತೆ ಕಾವ್ಯದಲ್ಲಿ ಸ್ತ್ರೀಯು ಸೃಷ್ಟಿಯ ಭಾಗವಾಗದಿರುವುದು 'ಪುರುಷ ಯಾಜಮಾನ್ಯ'ದ ರೂಪಕವಾಗುತ್ತದೆ. ಮಿಣುಕಿಹುಳುವಿನ ರೂಪದಲ್ಲಿ ಬೆಳೆಯುವ ಜೀವಿ ಮುಂದೆ ಪುರುಷನೇ ಆಗುತ್ತಾನೆ. ಕಾವ್ಯದಲ್ಲಿ ಈ ಕುರಿತು–

**'ಅವರು ಒಬ್ಬರೆ ಹುಟ್ಟಿ ಸ್ವಾಮಿ**
**ಒಬ್ಬರೆ ಯೋಚನೆ ಮಾಡುತಾರೆ**

..........................

**ಅಯ್ಯ ಬಲದಲಿ ನನ್ನಗುರುವು**
**ಉತ್ತರೇಶ್ವರನ ಪಡಕಂಡು**
**ಎಡದಲಿ ನನ್ನಪ್ಪ**

**ಮಹೇಶ್ವರನ ಪಡಕಂಡು**
**ಅವರು ಹೊನ್ನ ಹುತ್ತದ ಒಳಗೆ**
**ಉದ್ಭವವಾದರಂತೆ ದೇವಾ'[1]**

ಸಾಲುಗಳು ವ್ಯಕ್ತವಾಗುತ್ತದೆ. ಹೀಗೆ ಮೊದಲು ಸೃಷ್ಟಿಗೊಳ್ಳುವ ಪಾತ್ರಗಳೆಲ್ಲವೂ ಪುರುಷಪಾತ್ರಗಳೇ, ಆದರೆ ಅಲ್ಲಿ ಸೃಷ್ಟಿಶಕ್ತಿಯಾದ ಹೆಣ್ಣಿಗೆ ಅಸ್ತಿತ್ವವಿಲ್ಲದಂತಾಗಿದೆ. ಕಾವ್ಯದಲ್ಲಿ ಆದಿಶಕ್ತಿ ಮೊದಲ ಶಾಕ್ತದೈವವಾಗಿ ಕಾಣಿಸಿಕೊಳ್ಳುತ್ತದೆ. ಪ್ರಕೃತಿಯಾದ ಆದಿಶಕ್ತಿ ಮಿಲನಕ್ಕಾಗಿ ಪುರುಷನನ್ನು ಬಯಸಿದಾಗ ಮಂಟೇಸ್ವಾಮಿ ತಾಳುವ ನಿಲುವು ಮಡಿವಂತಿಕೆಯಿಂದ ಕಾಣುತ್ತದೆ. ಮಂಟೇಸ್ವಾಮಿ 'ನಿನ್ನ ಉದರದಿಂದ ಜನಿಸಿದ ಮಕ್ಕಳಿಗೆ ಮಡದಿಯಾಗು' ಎಂದು ಆಕೆಗೆ ಶಾಪವೀಯುತ್ತಾನೆ. ಇನ್ನು ತನ್ನ ದೇಹದಿಂದ ಪಡೆದ ಬ್ರಹ್ಮ, ಈಶ್ವರ, ವಿಷ್ಣು ಮಕ್ಕಳಲ್ಲಿ ಮೊದಲಿಬ್ಬರು ತಾಯಿಗೆ ಮಡದಿಯಾಗಲು ನಿರಾಕರಿಸಿ ಹೊರಟು ಹೋಗುತ್ತಾರೆ. ಆದರೆ ಕೊನೆಯವನಾದ ವಿಷ್ಣು ಆಕೆಯ ಅಂಗ ಸೌಷ್ಟಾಂಗವನ್ನೆಲ್ಲ ನೋಡಿ 'ಆಯ್ತು ನಾನು ನಿನ್ನ ಮಡದಿಯ ಮಾಡಿಕೊಳ್ಳುತ್ತೇನೆ, ಆದರೆ ನಾನು ಆಡುವ ನೃತ್ಯವನ್ನು ನೀನು ಆಡಿದರೆ ಮಾತ್ರ ಸ್ವೀಕರಿಸುತ್ತೇನೆ' ಎಂದೆನ್ನುತ್ತಾನೆ. ಆಕೆಯ ಉರಿ ಹಸ್ತ ಅವಳ ತಲೆ ಮೇಲಿಡುವಂತೆ ಮಾಡಿ ಆಕೆಯನ್ನು ಬೂದಿಯಾಗಿಸುತ್ತಾನೆ. ಹೀಗೆ ವೈದಿಕ ಪ್ರೇರಿತ ಪುರಾಣಗಳೇ ಆಗಲಿ ಅಥವಾ ಪುರುಷ ನಿರ್ಮಿತ ಈ ಪಂಥಗಳಲ್ಲೇ ಆಗಲಿ ಮಾತೃಸಂಸ್ಕೃತಿಯನ್ನು ಇಲ್ಲವಾಗಿಸುವಂತಹ ಹುನ್ನಾರ ಮಾಡಿಕೊಂಡು ಬಂದಿವೆ. ಅದಕ್ಕೆ ಸಾಕ್ಷಿ ಎಂಬಂತೆ ವಿಷ್ಣು, ಆದಿಶಕ್ತಿಯನ್ನು ಸುಟ್ಟು ಬೂದಿಯಾಗಿಸುವುದು,'ಪರುಶುರಾಮ ಎಲ್ಲಮ್ಮನ ತಲೆಯನ್ನು ಕಡಿಯುವುದನ್ನು ನೋಡಬಹುದು'. ಹೆಣ್ಣನ್ನು ಇಲ್ಲವಾಗಿಸಲು ಅವಳನ್ನು ಮರಳಾಗಿಸುವ, ಬೆಪ್ಪಾಗಿಸುವ, ಮಂಕಾಗಿಸುವ ಬಗೆಯ ವಿಷ್ಣುವಿನ ಕಾರ್ಯತಂತ್ರವೂ 'ಗಂಡಾಳ್ವಿಕೆಯ' ತಂತ್ರವಾಗಿದೆ. ತಾಯಿಯನ್ನು ಕೊಂದು ಬಂದವರು ಮಂಟೇಸ್ವಾಮಿಯ ಬಳಿ ಬಂದು ಶರಣಾಗುತ್ತಾರೆ.

**'ಸ್ವಾಮಿ ನಮ್ಮ ಪಡದಾ ತಾಯಿ**
**ಸಾಕಿದಂತ ತಾಯಿ ಎಂದರೇ ಅಂತಿಂತಾ ತಾಯಿಯಲ್ಲ**
**ಹುಟ್ಟುಟ್ಟದ ಮಕ್ಕಳಗೆಲ್ಲ ಕೆಟ್ಟ ವಾರುತೆ ಹೇಳಿದಂತಾ ತಾಯ'[2]**

ಈ ಕೆಟ್ಟ ತಾಯಿಯ ಕೊಂದಾಕಿವಿ ಎನ್ನುತ್ತಾರೆ. ಮಕ್ಕಳ ಮೂಲಕವೇ ತಾಯಿಯನ್ನು ಕೊಲ್ಲಿಸುವಂತಹ ಮಾತೃಸಂಸ್ಕೃತಿಹರಣ ಪ್ರಕ್ರಿಯೆ ಈ ಜಾನಪದ ಕಾವ್ಯದೊಳಗೆ ಸೇರಿಕೊಂಡಿದೆ. ನಂತರದಲ್ಲಿ ತ್ರಿಮೂರ್ತಿಗಳಿಗೆ ಸತಿಯರು ಬೇಕೆನ್ನುವ ಕಾರಣದಿಂದ 'ಪಾರ್ವತಿ', 'ಲಕ್ಷ್ಮಿ', 'ವಿಧಿಯಮ್ಮ'ರು ಉದಿಸಿ ಬರುತ್ತಾರೆ. ಅವರನ್ನು ವರಿಸಲು ತ್ರಿಮೂರ್ತಿಗಳು ಮುಂದಾಗುತ್ತಾರೆ. ಸ್ತ್ರೀ ದೈವಗಳೆಲ್ಲ ಪುರುಷ ದೈವಗಳ ನಂತರವೇ ಉದಿಸಿ ಬಂದವೆಂಬ ಚಿತ್ರಣವಿಲ್ಲಿದೆ. ಅಲ್ಲದೆ ಅವರ ಸೃಷ್ಟಿಯ ಉದ್ದೇಶ ತ್ರಿಮೂರ್ತಿಗಳಿಗೆ ಸತಿಯರಾಗಲೆಂದು. ಈ ಮೂಲಕ ಅವರು ಪುರುಷ ದೈವದ ಅಧೀನವಾಗಿಯೇ ಕಾಣಿಸಿಕೊಳ್ಳುತ್ತಾರೆ. 'ಗೊಂಬೆ' ತನಗೆ ಸೇರಿದ್ದು ಎಂದು ವಿಧಿಯಮ್ಮ

ಮತ್ತು ಬ್ರಹ್ಮನ ನಡುವೆ ನಡೆಯುವ ಸಂಘರ್ಷವು ಪುರುಷ ಮತ್ತು ಪ್ರಕೃತಿಯ ಸಂಘರ್ಷವೇ ಆಗಿದೆ. ಗೊಂಬೆ ಮಾಡಿದವಳು ನಾನು ಅದು ತನಗೆ ಸೇರಬೇಕೆಂಬುದು ವಿಧಿಯಮ್ಮನ ನಿಲುವಾದರೆ, ಗೊಂಬೆಗೆ ಜೀವ ತುಂಬಿದವನು ನಾನು ಹಾಗಾಗಿ ಆ ಗೊಂಬೆ ನನಗೆ ಸೇರಬೇಕೆಂದು ಬ್ರಹ್ಮನು ವಾದಿಸುತ್ತಾನೆ. ಅಲ್ಲೇ ಆಟವಾಡುತ್ತಿದ್ದಂತ ಗೊಂಬೆ ಒಮ್ಮೆಲೆ ವಿಧಿಯಮ್ಮನ ಸೆರಗ ಹಿಡಿದು ಹಿಂದಕ್ಕೆ ಸರಿದುಕೊಳ್ಳುತ್ತದೆ. ಸೃಜನಶೀಲತೆ ಇರುವುದು ಸ್ತ್ರೀಗೆ ಹಾಗಾಗಿ ಅದು ಹೆಣ್ಣಿಗೆ ಸೇರಬೇಕೆಂಬುದು ಇಲ್ಲಿಯ ನಿರ್ಧಾರದಂತೆ ತೋರುತ್ತದೆ.

ಮಂಟೇಸ್ವಾಮಿಯ ಮಧ್ಯಪ್ರವೇಶದಿಂದ ವಿಧಿಯಮ್ಮ ಗೊಂಬೆ ನಿರ್ಮಾಣದ ಕಾರ್ಯದಲ್ಲಿ ತೊಡಗಿದರೆ, ಬ್ರಹ್ಮ ಅವಕ್ಕೆ ಜೀವ ತುಂಬಬೇಕಾದ ಕರ್ತವ್ಯ ಮಾಡಬೇಕಾಗುತ್ತದೆ. ಮಂಟೇಸ್ವಾಮಿ ಈ ನಿಲುವಿನಲ್ಲಿ ಸ್ತ್ರೀ-ಪುರುಷರೀರ್ವರು ಜೀವಸೃಷ್ಟಿಯ ಸಮಾನಪಾಲುದಾರರೆಂಬ ಆಶಯವಿಲ್ಲಿ ವ್ಯಕ್ತವಾಗುತ್ತದೆ. ನಿಜವಾಗಿ ಇದನ್ನು ಸಿದ್ಧ-ನಾಥ ಮತ್ತು ಶಾಕ್ತಗಳ ಸಂಘರ್ಷವೆಂದು ಕರೆದರೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಈ ಸಂಘರ್ಷದ ಛಾಯೆಗಳು ಮುಖ್ಯವಾಗಿ ಕಾಣಿಸುವುದು 'ಕೆಂಪಾಚಾರಿ ಸಾಲು' ಹಾಗೂ 'ಸಿದ್ಧಪ್ಪಾಜಿ ಸಾಲಿ'ನಲ್ಲಿ. 'ಮುದ್ದಮ್ಮ' ತನ್ನ ಕಿರಿಮಗ 'ಕೆಂಪಾಚಾರಿ'ಯನ್ನು ಮಂಟೇಸ್ವಾಮಿಯ ಶಿಶುಮಗನಾಗಿ ನೀಡಬೇಕೆಂದು ಕೇಳಿಕೊಂಡಾಗ ನಿರಾಕರಿಸಿ ಪ್ರತಿಭಟಿಸುತ್ತಾಳೆ. ಮಂಟೇಸ್ವಾಮಿ ಅವರಿಗೆ ಸಿರಿಸಂಪತ್ತನ್ನೆಲ್ಲಾ ಕರುಣಿಸಿದ್ದರು ಕೂಡ ಅವೆಲ್ಲವನ್ನು ಹಿಂದಿರುಗಿಸಲು ಸಿದ್ಧವಾಗುತ್ತಾಳೆಯೇ ವಿನಃ ತನ್ನ ಮಗನನ್ನು ಕೊಡಲೊಪ್ಪುವುದಿಲ್ಲ. ಮಂಟೇಸ್ವಾಮಿ ಮುಂದಾಗುವ ಕಷ್ಟ-ಕಾರ್ಪಣ್ಯಗಳನ್ನು ಹೇಳಿದರೂ ಸಹ ಮುದ್ದಮ್ಮ ಒಪ್ಪದೆ 'ನಾನು ಮೂರ್ಕಾಸಿನ ಹೆಂಗ್ಸು ನಂದೇನಲ್ಲ ತೀರ್ಮಾನ ನನ್ನ ಪತಿ 'ಬಾಚಿಬಸವಯ್ಯ'ಗೆ ಬಿಟ್ಟದ್ದು' ಎಂದೆನ್ನುತ್ತಾಳೆ. ಅತ್ತ ಬಾಚಿಬಸವಚಾರಿ ಕೂಡ ತನ್ನ ಮಗನನ್ನು ಮಗನಾಗಿ ಕೊಡಲು ಒಪ್ಪುವುದಿಲ್ಲ. ಕೊನೆಗೆ ಕೆಂಪಾಚಾರಿಯ ಬಳಿ ತೆರಳಿ ಅವರ ಸತ್ವವನ್ನು ಪರೀಕ್ಷಿಸುತ್ತಾನೆ.

ಮೂವರನ್ನು ಪರೀಕ್ಷಿಸಿದ ಮಂಟೇಸ್ವಾಮಿ ಕೆಂಪಾಚಾರಿಯನ್ನು ತನ್ನ ಮಗನನ್ನಾಗಿ ಮಾಡಿಕೊಳ್ಳಬೇಕೆಂಬ ಹಠದಿಂದ 'ಅವರ ಮನೆಗೆ ಮಾರಿಕೂಡಬೇಕೆಂದು, ಮನೆಬರ್ದು ಮಾಡಬೇಕು' ಎಂದು ತೀರ್ಮಾನಿಸಿ ದಿಕ್ಕು-ದಿಕ್ಕಿನಿಂದಲೂ ಮಾರೀರು, ದುರ್ಗೀರು, ಚೌಡೀರನ್ನು ಕರೆಯುತ್ತಾನೆ. ಆಗ ಬರುವಂತಹ 'ಏಳುನೂರು ಮಾರೀರ' ಆಕೃತಿಗಳ ಸ್ವರೂಪವನ್ನು ವಿವರಿಸುವಾಗ ಅವೆಷ್ಟು ಕ್ರೂರವೆಂಬಂತೆ ಬಿಂಬಿಸಲು ಚಿತ್ರಿಸಿದಂತೆ ಕಾಣುತ್ತದೆ. ಆ ಮಟ್ಟಿಗೆ ನೋಡುವುದಾದರೆ ತಳಮುದಾಯದ ಪುರುಷ ದೇವರನ್ನೊರತುಪಡಿಸಿ ಬೇರಾವ ಪುರುಷ ದೈವಗಳು ಅಷ್ಟು ಕ್ರೂರವಾಗಿ ರಚನೆಗೊಂಡಿಲ್ಲ ಮತ್ತು ಬಿಂಬಿಸಲ್ಪಟ್ಟಿಲ್ಲ. ಆದರೆ ಈ ಶಕ್ತಿ ದೈವಗಳು ಮಾತ್ರ ಕುಂಟಗಿತ್ತಿ,

ಕುರುಡುಗಿತ್ತಿ, ಚೊತ್ತಗಿತ್ತಿ, ಕಿವುಡಗಿತ್ತಿಯಾಗಿ ಬಿಂಬಿಸಲ್ಪಟ್ಟು ಚಿತ್ರಿತವಾಗುತ್ತವೆ. ಅಲ್ಲದೆ ಕೇಡನ್ನು ತರುವ ರೋಗಗಳೆಲ್ಲ ಈ ಶಕ್ತಿ ದೈವದ ಹೆಸರುಗಳಿಗೆ ಮುದ್ರೆಗಳಾಗಿ ಬೀಳುತ್ತವೆ. ಆ ಮೂಲಕ ಜನಸಂಸ್ಕೃತಿಯಿಂದ ಅವನ್ನು ವ್ಯವಸ್ಥಿತವಾಗಿ ದೂರವಿಡಲಾಗುತ್ತದೆ. ಮನುಷ್ಯನಿಗೆ ಬರಬಹುದಾದ ಜ್ವರ, ಉಣ್ಣು, ಸಿಡುಬು, ಪಳೇಕಾರ, ವಾಂತ್ಭೇದಿ, ಕಾಲರ, ಪ್ಲೇಗ್ ಇತ್ಯಾದಿ ರೋಗಗಳಿಗೆಲ್ಲ 'ಮಾರಮ್ಮ'ನಂತ ಶಕ್ತಿ ದೈವದ ಹೆಸರು ಅಚ್ಚಾಗುತ್ತದೆ. ಇನ್ನು ಶಕ್ತಿ ದೈವವನ್ನು ಕುಲದೇವತೆಯಾಗಿ ನಂಬಿ ಪೂಜಿಸಿಕೊಂಡು ಬರುವ ಆಚಾರಿ ಸಮುದಾಯದ 'ಕುಲುಮೆ ಕಾಳಮ್ಮ' ದೇವತೆಯ ಚಿತ್ರಣವಿದಕ್ಕೆ ಸ್ಪಷ್ಟ ನಿದರ್ಶನವಾಗುತ್ತದೆ.

**'ಅವಳ ಬೆಟ್ಟದ ಗಾತ್ರ ಮಾರೀ**
**ಹೊಟ್ಟೆಯ ಬುಟ್ಟಗಂಡು**
**ಗುಡ್ಡಗಾತ್ರ ಮಾರಿ**
**ತಲೆಯನ್ನೇ ಬುಟ್ಟಗಂಡು**
**ತೊಂಡೆಗಾತ್ರ ಮಾರಿ**
**ಎರಡು ವಂದ್ರೀಯಗಲ ಮಾರಿ**
**ಕಣ್ಣನೇ ಬುಡ್ಕಂಡು**
**ಗವಿಅಗಲ ಮಾರವ್ವ**
**ಬಾಯನ್ನೆ ಬುಟ್ಟಗಂಡು**

........................

**ಅವಳು ಅರುವತ್ತಾರು ಹೆಣವಾ**
**ಅಂಗೈಲಿ ಇಡಕ್ಕಂಡು**
**ಮುವತ್ತುಮೂರೆಣವ ಮುಳ್ಳಲ್ಲಿ ಕಟ್ಟಿಗಂಡು**
**ಒಂಬಂಬತ್ತು ಹೆಣವ ಅವಳು**
**ಹಲ್ಲಲೀ ಕಚ್ಚಗಂಡು**
**ವಕ್ಕಡೆ ಕಿವಿಯ ಆಸ್ಕಂಡು ಮಲಗವಳೇ'**[3]

ಸ್ತ್ರೀದೈವಗಳೆಂದರೆ ಕೆಟ್ಟದೈವಗಳು, ಕೇಡನ್ನು ತರುವಂತಹ ದೈವಗಳು, ಆಸೆ ಬುರುಕ ದೈವಗಳು, ಹಿಂಸಾಮಯಿಗಳು, ತನ್ನ ಮಕ್ಕಳನ್ನೇ ಕೊಲ್ಲುವಳು, ತನ್ನ ಗಂಡನನ್ನೇ ಕೊಲ್ಲುವವಳು, ಅವರ ಶಿರಗಳನ್ನು ತನ್ನ ಆಭರಣಗಳನ್ನಾಗಿ ಮಾಡಿಕೊಳ್ಳುವವಳು ಎಂಬಿತ್ಯಾದಿ ಬಗೆಯಲ್ಲಿ ಸ್ತ್ರೀ ಮತ್ತು ಸ್ತ್ರೀದೈವಗಳನ್ನು ಪುರಾಣ, ಶಾಸ್ತ್ರ, ಚರಿತ್ರೆ ಮತ್ತು ಕಾವ್ಯದಲ್ಲಿ ಬಿಂಬಿಸಿಕೊಂಡು ಬರಲಾಗಿದೆ. ಆದರೆ ಯಾವೊಂದು ಪುರುಷ ದೈವವೂ ಕೂಡ ಹೀಗೆ ಕಾಣಿಸಿಕೊಳ್ಳದೆ ಇರುವುದು 'ಪುರುಷ ಯಾಜಮಾನ್ಯ ಮನಸ್ಥಿತಿ'ಯ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆ. ಇದರಿಂದ ಮಂಟೇಸ್ವಾಮಿ ಕಾವ್ಯವು ಕೂಡ ಹೊರತಾಗುವುದಿಲ್ಲ.

ಭಯಾನಕ ಸಾದೃಶ್ಯವಾಗಿ ಶಕ್ತಿದೇವತೆ ಚಿತ್ರತಳಾಗುತ್ತಾಳೆ. ಅಂದರೆ ಒಂದು ಸಮುದಾಯವನ್ನು ಪೊರೆಯಬಲ್ಲ, ರಕ್ಷಿಸಬಲ್ಲ ದೇವತೆ ಹೆಣಗಳ ರಾಶಿಯನ್ನು ಬಾಯಲ್ಲಿ, ಮಡಿಲಲ್ಲಿ ಕಟ್ಟಿಕೊಳ್ಳುವುದಾದರೂ ಹೇಗೆ? ತಾಯ್ತನದ ಹೆಣ್ಣಾಗಿರುವ ಅವಳು ಹೀಗೆಂದಾದರೂ ಮಾಡಲು ಸಾಧ್ಯವೇ? ಪುರುಷ ಪ್ರಧಾನ ವ್ಯವಸ್ಥೆಯ ಇಂತಹ ಚಿತ್ರಣವನ್ನು ಅವಳ ಮೇಲೆ ಹೊರಿಸಿರುವುದು ಅವರ ಅಸಹನೆಯ ಮನಸ್ಥಿತಿಗೆ ಹಿಡಿಯಬಹುದಾದ ಕನ್ನಡಿಯಾಗಿದೆ. ಇಲ್ಲಿ ಬರುವ ಆಚಾರಿ ಸಮುದಾಯ ಮಾತೃಸಂಸ್ಕೃತಿ ಮೂಲೀಯವಾಗಿದ್ದು ಅದನ್ನು ನಾಶಗೊಳಿಸಿ ಮಂಟೇಸ್ವಾಮಿ ಆ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಪ್ರಯತ್ನವಿಲ್ಲಿ ವ್ಯಕ್ತಗೊಡಿದೆ.

ಮಂಟೇಸ್ವಾಮಿ ಕರೆದಾಗ ಬರುವ ಏಳನೂರು ಮಾರೀರಲ್ಲಿ 'ಕುಲುಮೆ ಕಾಳಮ್ಮ' 'ನಿನ್ನ ವೈರಿಗಳ ತೋರಪ್ಪ ಈ ಬೆಟ್ಟು ತೋರಿದ ಮನೆಗೆ ನಾ ಹೊಂಟೋಗ್ತೀನಿ ಕಣಪ್ಪ' ಎಂದೇಳಿ ಮಂಟೇಸ್ವಾಮಿಯ ಬಳಿ ದೀನವಾಗಿ ನಿಲ್ಲುತ್ತದೆ. 'ನೀನೇ ಕಟ್ಟಿದ, ಬೆಳೆಸಿದ ಮಕ್ಕಳಿರುವ ನಿನ್ನ ಮನೆಗೆ ನೀನೆ ಹೋಗಬೇಕು, ನಿನ್ನ ಮಕ್ಕಳನ್ನು ನೀನೇ ತಿನ್ನಬೇಕು, ನೀನು ಕಟ್ಟಿದ ಮನೆಯ ನೀನೇ ಮುರಿದು ಹಾಕ್ಬೇಕು ಮಾರುವಳ್ಳಿಯ ಮನೆತನದ ಬಸವಚಾರಿ ಮುದ್ದಮ್ಮನ ಮನೆಗೆ ನೀವು ಹೋಗಬೇಕೆಂದು ಮಂಟೇಸ್ವಾಮಿ ಹೇಳುತ್ತಾನೆ'. ಇದು ಒಂದು ಬಗೆಯಲ್ಲಿ ಹೆತ್ತ ತಾಯಿಗೆ ತನ್ನ ಮಗುವನ್ನು ಕತ್ತು ಹಿಸುಕಿ ಕೊಲ್ಲು ಎಂದೇಳಿದಂತೆ ಭಾಸವಾಗುತ್ತದೆ. ಇದಕ್ಕೆ ಕಾಳಮ್ಮ ದಿಟ್ಟವಾಗಿ ವಿರೋಧಿಸಿ 'ನೀವು ಎಲ್ಲಿಗೇಳಿದ್ರು ಹೋಯ್ತೀನಿ ಆದರೆ ನಾನಲ್ಲಿಗೆ ಹೋಗುವುದಿಲ್ಲ, ಬಸವಚಾರಿ ಮನೆ ನನ್ನ ಮನೆ, ಮುದ್ದಮ್ಮನ ಮಕ್ಕಳು ನನ್ನ ಮಕ್ಕಳು, ನನ್ನ ಮನೆಗೆ ನಾನೇ ಹೋಗಿ ಬೆಂಕಿ ತೋರಲಾರೆ, ನನ್ನ ಮಕ್ಕಳನ್ನು ನಾನೇ ತಿನ್ನಲಾರೆ, ನಾನಲ್ಲಿಗೆ ಖಂಡಿತವಾಗಿಯೂ ಹೋಗಲಾರೆ' ಎಂದು ಕಡ್ಡಿತುಂಡಾದಂತೆ ಹೇಳಿಬಿಡುತ್ತಾಳೆ. ಮುಂದುವರಿದು ಮಂಟೇಸ್ವಾಮಿ 'ನೀನು ಹೋಗದಿದ್ದರೂ ಪರವಾಗಿಲ್ಲ ಹೋಗುವಂತ ಮಾರೀರ ನಾನು ಕಳಿಸ್ತೀನಿ' ಎಂದಾಗ ಕಾಳಮ್ಮ ಅದಕ್ಕೂ ನಾನು ಬಿಡುವುದಿಲ್ಲ ವೆನ್ನುತ್ತಾ:

**'ಅಕ್ಕ ಹೋಗದಿದ್ದ ಮನೆಗೆ**
**ತಂಗೇರು ತಾನೆ ಯಾರೋದರು**
**ಆ ಹೋಗೋ ಮಾರೀರ್ನ ನಾ ಕಳುಗ್ಬುಟೀನಪ್ಪಾ**
**ಹೋಯ್ತಿನಿ ಅನ್ನುವಂತ ಮಾರೀರ**
**ನಾ ಮನೆಗೆ ಕೂಡಿನ ಬುದ್ದಿ**
**ಹೋಯ್ತಿನಿ ಅನ್ನುವಂತ ಮಾರೀರು**
**ಕೂಡ ನಾ ಕಳುಗುಸುದಿಲ್ಲ**
**ನಾನು ಕೂಡ ಹೋಗೋದಿಲ್ಲ'[4]**

ಎಂದು ಮಂಟೇಸ್ವಾಮಿಗೆ ಎದುರಾಗಿ ನಿಲ್ಲುತ್ತಾಳೆ. ಈ ದೈವವನ್ನು

ಉಪಾಯದಿಂದ ಮುಂದಕ್ಕೆ ಕರೆದು ಮಂಟೇಸ್ವಾಮಿ ಎಡಗೈಯಿಂದ ಜಡಿದು ಅವಳ ಮುಂದಲೆವಿಡಿದು ತನ್ನ ಜೋಳಿಗೆಯೊಳಗಿದ್ದ 'ಉರಸಂಗಿ ಕೊರಡವ' ತೆಗೆದು ಚೊಳ್ಳು ಚೊಳ್ಳನೆ ಮೂರೇಟ ಅವಳ ಕುಂಡಿಗೆ ಹೊಡೆಯುತ್ತಾರೆ. ಪುರುಷಧಾರ್ಷ್ಟ್ಯ ಮನಸ್ಥಿತಿಯು ಹೆಣ್ಣು ಒಪ್ಪದೇ ಇದ್ದಾಗ ಅವಳನ್ನು ದೈಹಿಕವಾಗಿ ಜಡಿದು ಭಯಗೊಳಿಸಿ ತನ್ನ ಕಾರ್ಯವನ್ನು ಸಾಧುಮಾಡಿಕೊಳ್ಳುತ್ತದೆ. ಗಮನಾರ್ಹಂಶವೆಂದರೆ ಶಕ್ತಿದೈವಗಳೆಲ್ಲಾ ಪುರುಷದೈವಗಳ ಮುಂದೆ ಅಶಕ್ತವಾಗಿರುವಂತೆ ಚಿತ್ರಿಸಿರುವ ಕ್ರಮ, ಅಷ್ಟೆಲ್ಲ ರೌದ್ರಾಕಾರ, ಭೀಕರವಾಗಿರುವ ದೈವಗಳು ಪುರುಷದೈವಗಳ ಮುಂದೆ ಬಾಯಿಬಿಡದಂತೆ ಮಾಡಿರುವುದು ಗಂಡಾಳ್ವಿಕೆಯ ಹುನ್ನಾರವೇ ಸರಿ. ಇಲ್ಲಿ ನಡೆಯುವ ಮಂಟೇಸ್ವಾಮಿ ಮತ್ತು ಶಕ್ತಿ ದೈವಗಳ ಸಂಘರ್ಷದಲ್ಲಿ ಶಕ್ತಿ ದೈವಗಳು ಪೆಟ್ಟುತಿಂದು ಭಯಗೊಂಡು ಪುರುಷಾಧೀನವಾಗಿ ಅವರು ಹೇಳಿದಂತೆ ಕೇಳುವ ಕೈಗೊಂಬೆಗಳಾಗಿ ರಚನೆಯಾಗಿವೆ. ಇವೆಲ್ಲದರ ಮಧ್ಯೆ ಕಾಳಮ್ಮ ತೋರುವ ದಿಟ್ಟ ನಿಲುವು ಗಂಡಾಳ್ವಿಕೆಯ ಮನಸ್ಥಿತಿಗೊಡ್ಡಿದ ದಿಟ್ಟ ಪ್ರತಿಕ್ರಿಯೆಯಾಗಿ, ಸಂಘರ್ಷವಾಗಿ ಕಾಣಿಸುತ್ತದೆ. ಮಂಟೇಸ್ವಾಮಿಯ ಧೋರಣೆಯಿಂದ 'ನಿನಗೆ ಬೇಡದಿದ್ದ ಒಕ್ಕಲು ನನಗೆ ಯಾಕಪ್ಪ' ಎಂಬ ಭಯಗ್ರಸ್ತ ಅನಿವಾರ್ಯತೆಯಿಂದಲೇ ಬಸವಚಾರಿ–ಮುದ್ದಮ್ಮನ ಮನೆಗೆ ನುಗ್ಗುತ್ತಾಳೆ. ಕಾಳಮ್ಮನಿಗೆ ಹೊಡೆಯುವ ದೃಶ್ಯ ನೋಡಿದ ಉಳಿದೆಲ್ಲ ಮಾರಿಗಳು ಎದ್ನೋ, ಬಿದ್ನೋ ಎಂಬಂತೆ ಓಡುತ್ತವೆ. 'ಚಾಮುಂಡಿ'ಗೆ 'ಓಡುವಂತಹ ಮಾರಿ ಎಳ್ಕೊಂಡು ಬಂದು ನನ್ನ ಪಾದಕ್ಕೆ ಹಾಕದಿದ್ದರೆ ನಿನ್ನ ಮೂಗು, ಮುಂದಲೇ, ಮೈನಾ ಚರ್ಮ ಒಂದು ಉಳಿಸಾಕ್ಕಿಲ್ಲ'ವೆಂದು ಮಂಟೇಸ್ವಾಮಿ ಘೇರಾವು ಹಾಕುತ್ತಾನೆ. ಭಯಗೊಂಡ ಚಾಮುಂಡಿ ಆ ಮಾರೀರನ್ನೆಲ್ಲ ಎಳೆದು ತಂದು ಮಂಟೇಸ್ವಾಮಿಯತ್ತ ಹಾಕುತ್ತಾಳೆ.

**'ಎಲ್ಲಾ ಮಾರೀರ್ನ**
**ಒಂದಿಗೆ ಕಟ್ಟಿಕಂಡು ಹೋಗಬೇಕು ಎನುತೊಳಿ**
**ಕುರುಬೇ ಗೌಡ ಕುರಿಮಂದೆ ಗುರುವು**
**ಯಾವ ರೀತಿ ಹೊಡಕಂಡು ಬಾರೋ**
**ಆದೀ ಪರಕಾರದಲ್ಲಿ ಜಗದ ಜ್ಯೋತಿ**
**ಧರೆಗೆ ದೊಡ್ಡಯ್ಯ,**
**ಅವರು ಮಾರಿರಾ ಕರ್ದುಕಂಡು**
**ಮಾರುವಳ್ಳಿಗೆ ಬರುತಾರೆ ॥ ಸಿದ್ಧಯ್ಯ॥'**[5]

ಕುರಿಮಂದೆಯ ರೀತಿಯಲ್ಲಿ ಮಾರೀರನ್ನು ಹೊಡೆದುಕೊಂಡು ಬಂದರು ಎಂಬಲ್ಲಿನ ಪುರುಷಾಧಿಕಾರಸ್ಥ ಮನಸ್ಥಿತಿ ಮತ್ತದರ ಕ್ರೌರ್ಯ ಅಭಿವ್ಯಕ್ತಿಗೊಳ್ಳುತ್ತದೆ. ಶಕ್ತಿದೈವಗಳನ್ನೆಲ್ಲ ಸಿದ್ಧಪರಂಪರೆ ವ್ಯಕ್ತಿಯೊಬ್ಬ ಸ್ತ್ರೀಯನ್ನು ನಗಣ್ಯವಾಗಿಸಿ ತನ್ನ ಹತೋಟಿಗೆ ತೆಗೆದುಕೊಂಡಿರುವುದು ಕುರಿತಾಗಿಯೂ ಕಾವ್ಯ ಸ್ಪಂದಿಸುತ್ತದೆ. ಯಾವ ಪಂಥವೇ ಆಗಲಿ, ಧರ್ಮವೇ ಆಗಲಿ, ಅಲ್ಲಿರುವ ಪುರುಷ, ಸ್ತ್ರೀಯನ್ನು ತನ್ನ

ಅಂಕೆಯಲ್ಲಿಟ್ಟುಕೊಳ್ಳಲು ಸದಾ ಹಾತೊರೆಯುತ್ತಿರುತ್ತಾನೆ. ಅದಕ್ಕೆ ಮಾರೀರ ಪ್ರಸಂಗ ಒಂದು ನಿದರ್ಶನವಷ್ಟೇ. ಸ್ತ್ರೀಯರಿರಲಿ ಶಕ್ತಿದೈವಗಳನ್ನು ಕೂಡ ಹಾಗೆ ನಡೆಸಿಕೊಂಡಿರುವುದು ಮತ್ತದನ್ನು ಚಿತ್ರಿಸುವುದರ ಹಿಂದಿನಲ್ಲಿನ ಪುರುಷಧಾರ್ಷ್ಟ್ಯ ಮನಸ್ಥಿತಿ ಇಲ್ಲಿ ವ್ಯಕ್ತಗೊಂಡಿದೆ. ಮುಂದುವರೆದು ಮನುಷ್ಯ ಜೀವಿಯಾಗಿ ಹುಟ್ಟಿ ಮಂಟೇಸ್ವಾಮಿಯ ದೀಕ್ಷೆಯನ್ನು ಪಡೆದ ಸಿದ್ಧಪ್ಪಾಜಿ ಕಬ್ಬಿಣದ ಭಿಕ್ಷೆ ಕೇಳಲು ತನ್ನೂರಾದ ಹಲಗೂರಿಗೆ ಬಳೆಗಾರನ ವೇಷವ ತೊಟ್ಟು ಬರುವಾಗ ಶಕ್ತಿದೈವಗಳಾದ ಮಾರೀರನ್ನು ಕ್ರೌರ್ಯದಿಂದ ಹಿಂಸಿಸುವುದನ್ನು ಕಂಡರೆ ಮಾತೃಸಂಸ್ಕೃತಿಯ ಮೇಲಿದ್ದ ದ್ವೇಶ, ಅಸೂಯೆ ಅಂತ ಗುಣಗಳು ಅವರಲ್ಲಿ ಪ್ರದರ್ಶನಗೊಳ್ಳುತ್ತವೆ.

ಇಂತಹ ಸನ್ನಿವೇಶಗಳನ್ನು ಸ್ತ್ರೀಪರ ದೃಷ್ಟಿಕೋನದಿಂದ ನೋಡುವುದನ್ನು ಅನೇಕ ವಿದ್ವಾಂಸರು ಒಪ್ಪುವುದಿಲ್ಲ. ಹಾಗಾಗಿ 'ಕಿ.ರಂ.ನಾಗರಾಜ'ರವರು "ಇಲ್ಲಿ ಮಂಟೇಸ್ವಾಮಿ ಗಂಡು ದರ್ಪದವನಲ್ಲ. ಲಿಂಗಪ್ರಜ್ಞೆಯನ್ನು ಕಳೆದುಕೊಂಡು ಆಧ್ಯಾತ್ಮಿಕ ಉನ್ನತೀಕರಣದ ಸಂದರ್ಭವಿದು"[6] ಎಂದು ಈ ಮಂಟೇಸ್ವಾಮಿಯನ್ನು ಸಮರ್ಥಿಸಿಕೊಳ್ಳುವುದು ಅರ್ಥಹೀನ. ಈ ಕುರಿತೆ ಡಾ.ಪಿ.ಕೆ.ರಾಜಶೇಖರವರು "ಈ ಮಾರಿಯರ ಪಾತ್ರಗಳು ಸ್ತ್ರೀವಾದಿ ನೆಲೆಯಿಂದ ಚಿಂತಿಸುವವರಿಗೆ ಶೋಷಣೆಗೆ ಸಿಕ್ಕಿ ಸಂಕಟಪಡುತ್ತಿರುವವರು ಎನಿಸಿದರೆ ಆಶ್ಚರ್ಯವಿಲ್ಲ. ಈ ಪಾತ್ರಗಳು ಬೇರೆ-ಬೇರೆ ಕಾರಣಕ್ಕಾಗಿ ಸಾಂಕೇತಿಕವಾಗಿ ಬಂದಿವೆ ಎಂದು ಹೇಳಿ ನುಸುಳಿಕೊಳ್ಳುವುದಕ್ಕಾಗುವುದಿಲ್ಲ"[7]ವೆನ್ನುವ ಮಾತುಗಳು ಸ್ತ್ರೀ ಸಂಕಟಕ್ಕೆ ಹಿಡಿಯಬಹುದಾದ ಕನ್ನಡಿಯಾಗಿವೆ.

ಸಮುದಾಯವೊಂದು ಮಾತೃದೇವತೆಯಾಗಿ 'ಮಾರಮ್ಮ' ದೈವಗಳನ್ನು ಆರಾಧಿಸಿಕೊಂಡಿರುವ ಹೊತ್ತಿನಲ್ಲಿ ರಕ್ಷಣೆಗಾಗಿ ಅವರು ಊರ ಸುತ್ತಲೂ ತಮ್ಮ ಆರಾಧ್ಯ ದೈವವಾದ ಕಾಳಿಕಾದೇವತೆ, 'ಮೂಡುಮಾರಿ', 'ತೆಂಕುಮಾರಿ', 'ಪಡುವಕಾಳಿ', 'ಮಂಡೆಮಾರಿ'ಗಳನ್ನು ನೇಮಿಸಿಕೊಂಡಿರುತ್ತಾರೆ. ರಕ್ಷಣೆಯ ಗಸ್ತಿನಲ್ಲಿರುವಾಗ ಅನ್ಯ ಪರಂಪರೆಯಾವನಾದ ಸಿದ್ಧಪ್ಪಾಜಿ ತಮ್ಮ ಸುಪರ್ದಿಯ ಒಳಗೆ ಕಾಲಿರಿಸುವಾಗ ಅವನನ್ನು ಕೊಲ್ಲಲು ಈ ದೈವಗಳು ಮುಂದಾಗುತ್ತವೆ. ಒಂದೊಂದಾಗಿ ಈ ಮಾರಿರನ್ನು ಎದುರುಗೊಳ್ಳುವ ಸಿದ್ಧಪ್ಪಾಜಿ ಆರಂಭದಲ್ಲಿ 'ಮೂಗುಮಾರಿ'ಯನ್ನು ಹತ್ತಿರಕ್ಕೆ ಕರೆದು ಈಗಾಗಲೇ ಮಂಟೇಸ್ವಾಮಿ ಕಾಳಮ್ಮನಿಗೆ ಹೊಡೆದಂತೆ ಈ ದೈವದ ಜಡೆಹಿಡಿದು ಜೋಳಿಗೆಯಲ್ಲಿದ್ದು ಉರುಸಂಗಿ ಕೊರಡದಿಂದ ಮೂರೇಟು ಹೊಡೆಯುತ್ತಾನೆ. ಹೊಡೆದೇಟಿಗೆ ಕೂಗಲು ಹೋಗಿ ಮೂಗುಮಾರಿಗೆ ಮಾತು ಬರುತ್ತದೆ. ತಕ್ಷಣವೇ ಅವಳು ಪೆಟ್ಟನ್ನು ಮರೆತು ಸಿದ್ಧಪ್ಪಾಜಿಯ ಕಾಲಿಗೆರಗಿ ಹಲಗೂರಿಗೆ ದಾರಿ ತೋರಿಸುವಂತೆ ಮಾಡಿಕೊಳ್ಳುತ್ತಾನೆ. ಇಲ್ಲಿ ಕಾಣುವ ಪ್ರಮುಖ ಅಂಶವೆಂದರೆ ಪುರುಷನಿಂದ ದರ್ಪಕ್ಕೊಳಗಾಗಿದ್ದು ಕೂಡ ಅದು ಭಾಗ್ಯವನ್ನು ತರುತ್ತದೆ ಎಂಬಂತೆ ಚಿತ್ರಿಸಿರುವುದು. 'ಸುಂಕದ ಮಾರಮ್ಮ'ನಿಗೂ ಹೀಗೆಯೆ ಹೊಡೆದಾಗ ಅವಳ ಕಣ್ಣುಗಳೇ

ಬಿದ್ದುಹೋಗಿ ಕುರುಡಿಯಾಗಿ ಬಿಡುತ್ತಾಳೆ. 'ಪಡುವ ಕಾಳಿ' ಆತನ ಬಳಿ ಬಂದಾಗ–

**'ನನ್ನ ಮುಟ್ಟೋ ಮುಟ್ಟು ಬ್ಯಾಡ**
**ನನ್ನ ಮುಟ್ಟು ತಟ್ಟು ಮಾಡುಬ್ಯಾಡ**
**ಅಲ್ಲೇ ನಿಂತ್ಗವ್ವ..........[8]**

ಎಂದು ಮಡಿ ಆಚರಿಸುತ್ತಾನೆ. ಮಾಚಯ್ಯನೊಂದಿಗೆ ಸಂವಾದಿಸುವಾಗ ಮುಟ್ಟು–ತಟ್ಟಿನ ಮಡಿವಂತಿಕೆಯನ್ನು ವಿರೋಧಿಸಿದ ಈ ಕಾವ್ಯ ಪುನಃ ಅದೇ ಮಡಿ, ಮೈಲಿಗೆಯಲ್ಲಿಗೆ ಬಂದು ನಿಲ್ಲುತ್ತದೆ. 'ಪಡುವಕಾಳಿ' ತಿನ್ನಲು ಮುಂದಾದಾಗ ಸಿದ್ಧಪ್ಪಾಜಿ ತನ್ನ ಕಾಲಿನಿಂದ ಆಕೆಯನ್ನು ಒದೆಯುತ್ತಾನೆ. ಒದೆತತಿಂದ ಪಡುವಕಾಳಿ ಬಿದ್ದಾಡಿಕೊಂಡು ನೆಲದಲ್ಲಿ ಹೊರಳಾಡಿ ಶರಣಾಗುತ್ತಾಳೆ. ಸಿದ್ಧಪ್ಪಾಜಿಯ ಉರುಸಂಗಿಯಿಂದ ಪೆಟ್ಟುತಿಂದ 'ಮಂಡೆಮಾರಮ್ಮನಿಗೆ' ಮೈಯಲ್ಲ ಉರಿಬಂದು ಹೊರಳಾಡುತ್ತಾಳೆ. ನೀವೇಳಿದಂತೆ ಕೇಳುತ್ತೇನೆ ಎಂದಾಗ ಸಿದ್ಧಪ್ಪಾಜಿಯ ಪುರುಷ ದರ್ಪದ ಮಾತುಗಳು ಹೀಗೆ ಬರುತ್ತವೆ–

**'ನಾನು ಕರಗಳಗೇಲಿ ಬರಬೇಕು**
**ಕೂಗ್ದ ಶಬ್ದದಲ್ಲಿ ಬಂದ್ಬುಡಬೇಕು.....[9]**

**'ಮಾರೀರ ಮಸಣೀರ ಗಂಡ**
**ದುರ್ಗಿ ಚೌಡೀರಮಿಂಡ'[10]**

ಎಂಬ ಸಾಲುಗಳಲ್ಲಿ ಮೇಲೆ ಹೇಳಿದಂತಹ ಅಂಶಗಳು ಸಮರ್ಥನೀಯವಾಗಿ ಅಭಿವ್ಯಕ್ತವಾಗುತ್ತದೆ. ಹಲಗೂರಿನ ಪಾಂಚಾಳ ದೊರೆಗಳು ತಮ್ಮ ರಕ್ಷದೈವವಾಗಿದ್ದ 'ಕಾಳಿಕಾದೇವಿ' ಮಠದಲ್ಲಿ ಸಿದ್ಧಪ್ಪಾಜಿಯನ್ನು ಕೂಡಿ ಹಾಕಿದಾಗ, ಒಳಗೆ ಹೋದ ಸಿದ್ಧಪ್ಪಾಜಿ 'ನಾನು ಬೆಳಗಾಗುವ ತನಕ ಇಲ್ಲಿರ್ತೀನಿ ನೀನು ಹೊರಗೆ ಹೋಗು ಇಲ್ಲದಿದ್ದರೆ ನಿನ್ನ ಮೂಗು, ಮೈ ಚರ್ಮ, ಮುಂದಲೆ ಒಂದು ಉಳಿಸಿಕ್ಕಿಲ್ಲ'ವೆಂದು ಶಕ್ತಿ ದೈವದ ಕೇಂದ್ರಕ್ಕೆ ಬಂದು, ಅದಕ್ಕೇ ಘೇರಾವು ಹಾಕುತ್ತಾನೆ. ಅದನ್ನು ಮೆಟ್ಟಿ ನಿಲ್ಲಲು ಕಾಳಿಕಾದೇವಿ ಆತನನ್ನು ಎದುರುಗೊಳ್ಳಲು ಮುಂದಾದಾಗ ಸಿದ್ಧಪ್ಪಾಜಿ –

**'ಎಡಗಾಲಿನಾ ಒಳಗೆ ದೇವಾ**
**ಜಾಡ್ಸಿ ಒತ್ತ ಒದ್ದಾರಂತೆ ॥ ಸಿದ್ದಯ್ಯ ॥**
**ಅವಳು ಒದ್ದಂತ ಒತ್ತಕ್ಕೆ ಮಾರಿ**
**ನಡು ಬೀದಿಲಿ ಬಿದ್ದಳಲ್ಲ ॥ ಸಿದ್ದಯ್ಯ ॥'[11]**

ಒದೆತತಿಂದು ಕಾಳಿಕಾದೇವಿ ಬೀದಿಗೆ ಬಂದು ಬೀಳುವುದು ಒಂದು ಬಗೆಯಲ್ಲಿ ಶಾಕ್ತದೈವಗಳನ್ನು ಹೊರಗಟ್ಟಿ ಆ ಸ್ಥಾನಗಳನ್ನು ಸಿದ್ದ ಪರಂಪರೆಯ ವ್ಯಕ್ತಿಗಳು ಆಕ್ರಮಿಸಿಕೊಂಡಿದ್ದರ ರೂಪಕವಾಗಿ ಕಾಣಿಸಿಕೊಳ್ಳುತ್ತದೆ. ಅದು ಎಲ್ಲಿಯವರೆಗೆ

ಹೋಗುತ್ತದೆಂದರೆ ಅದನ್ನು ನಂಬಿ ಪೂಜಿಸಿಕೊಂಡು ಬಂದಂತಹ ಸಮುದಾಯದೆದುರು ಆ ದೈವವನ್ನು ಏನು ಅಲ್ಲವೆಂಬಂತೆ ನಗಣ್ಯವಾಗಿಸಿ ಆ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಹುನ್ನಾರವನ್ನು ಪುರುಷ ಪ್ರಧಾನ ವ್ಯವಸ್ಥೆ ಹಾಗೂ ಅದರಿಂದ ರೂಪಿತವಾದ ದೈವಗಳು ಕಾರ್ಯಗಳನ್ನು ಮಾಡುತ್ತವೆ. ಇದಕ್ಕೆ ಪೂರಕವಾಗಿ ಪಾಂಚಾಳ ದೊರೆಗಳು ತಮ್ಮ ದೇವಿ ಈ ಜಂಗಮನನ್ನು ಕೊಂದು ನಮ್ಮನ್ನು ರಕ್ಷಿಸುತ್ತಾಳೆ ನಮಗೆ ಗೆಲುವನ್ನು ನೀಡುತ್ತಾಳೆ ಎಂದು ಭಾವಿಸಿದವರಿಗೆ 'ಒಳ್ಳೆಯ ಮಾರಿ ಅಂತ ನಾವು ಪೂಜೆ ಮಾಡ್ಸಿದ್ರೆ ಇವಳು ನಮಗೆ ಬೇಡವಾದವನ ಮಠದಲ್ಲಿ ಬಿಟ್ಟು ಮನೆದೇವತಿ ಬೀದಿಯಲ್ಲಿ ಬಿದ್ದವಳಲ್ಲ ಇವಳು ದೇವರ ನಿಜವಾದ ದೇವರಲ್ಲ ಕಲ್ಲು ದೇವರು' ಎನ್ನುವಂತೆ ವ್ಯವಸ್ಥೆ ಮಾಡುತ್ತದೆ. ಕೊನೆಗೆ,

**'ಈ ಕೆಟ್ಟಾ ಮಾರಿ ಮುಂಡೆಯ ನಾವು**
**ನೆಚ್ಚಬಾರದು ಎಂದರಲ್ಲಾ ॥ ಗಂಗಾಧರ ॥'**[12]

ಎಂಬಲ್ಲಿಗೆ ಅವರ ಮನಸ್ಥಿತಿ ಬಂದು ನಿಲ್ಲುವಂತೆ ಮಾಡಲಾಗುತ್ತದೆ. ಈ ರೀತಿಯಾಗಿ ಸ್ತ್ರೀದೈವಗಳನ್ನು ಜನಪದರಿಂದ ಅಸಡ್ಡೆಗೊಳಗಾಗುವಂತೆ ಮಾಡಲಾಗಿದೆ. ಆದಾಗ್ಯೂ ಕೂಡ ಸಮಕಾಲೀನದಲ್ಲಿ ಅನೇಕ ತಳಸಮುದಾಯಗಳಲ್ಲಿ ಈ ಸ್ತ್ರೀದೈವಗಳೇ ಪ್ರಧಾನದೇವತೆಗಳಾಗಿ ಆರಾಧನೆಗೊಳ್ಳುತ್ತಿವೆ.

ಪುರುಷಪಾತ್ರ ಹಾಗೂ ದೈವಗಳಿಂದ ಒದೆಸಿಕೊಳ್ಳುವ, ಬಡಿಸಿಕೊಳ್ಳುವ, ಮುಂದಲೇವಿಡಿದು ಜಡಿಸಿಕೊಳ್ಳುವಂತ ಇತ್ಯಾದಿ ಬಗೆಯಲ್ಲಿ ಸ್ತ್ರೀಪಾತ್ರಗಳು ಚಿತ್ರತಗೊಂಡಿವೆ. ಪುರುಷ ಪ್ರಧಾನವಾದ ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆ ಹೆಣ್ಣನ್ನೇ ಆಗಲಿ, ಹೆಣ್ಣು ದೈವವನ್ನೇ ಆಗಲಿ ಅವರನ್ನು 'ದ್ವಿತೀಯ ದರ್ಜೆ'ಯ ವ್ಯಕ್ತಿಗಳನ್ನಾಗಿಯೇ ನಡೆಸಿಕೊಳ್ಳಲಾಗಿದೆ. ಒಂದ್ಕಾಸು, ಮೂರ್ಕಾಸು ಬೆಲೆಯ ಹೆಣ್ಣುಗಳಾಗಿ 'ಮುದ್ದಮ್ಮ', 'ಮಲ್ಲಿಗೆ ಮಹಾದೇವಮ್ಮ' ನಡೆಸಿಕೊಳ್ಳಲ್ಪಡುತ್ತಾರೆ. ಅಲ್ಲದೆ 'ದೊಡ್ಡ ತಾಯಮ್ಮ', 'ಚೆನ್ನಾಜಮ್ಮ' 'ಮಲ್ಲಿಗೆ ಮಹಾದೇವಮ್ಮ' ಇತ್ಯಾದಿ ಸ್ತ್ರೀಪಾತ್ರಗಳು ಪುರುಷಪಾತ್ರ ಹಾಗೂ ದೈವದ ಸೇವೆಗಾಗಿ ತಮ್ಮನ್ನು ತಾವು ದುಡಿಸಿಕೊಳ್ಳುವಂತೆ ಮಾಡಲಾಗಿದೆ. ಅವರಿಗೆ ಅವರದ್ದೇ ಆದ ಯಾವ ಅಸ್ತಿತ್ವವಾಗಲಿ, ಅಸ್ಮಿತೆಯಾಗಲಿ ಇಲ್ಲ. ಅಷ್ಟೇ ಅಲ್ಲದೆ ಕಾವ್ಯದೊಳಗೆ 'ಮಾಯ್ಕಾರರಾಗಿ', 'ಲೀಲೆಗಾರರಾಗಿ' ಕಾಣಿಸಿಕೊಳ್ಳುವುದು ಮಂಟೇಸ್ವಾಮಿ, ರಾಚಾಪ್ಪಾಜಿ, ಮತ್ತು ಸಿದ್ಧಪ್ಪಾಜಿಯಂತ ಪುರುಷ ಪಾತ್ರಗಳೆ. ಸ್ತ್ರೀಪಾತ್ರಗಳು ಅವರ ಪಾದಪೂಜೆಗೆ, ಅಂಗಪೂಜೆಗೆ ಜೀತದಾಳುಗಳಾಗಿರಬೇಕಾದ ಸನ್ನಿವೇಶಗಳಿವೆ. ಇವರನ್ನು ಶಿಶುಮಕ್ಕಳನ್ನಾಗಿ ಪಡೆದರು ಕೂಡ ಮತ್ತೆ ಪಟ್ಟಕ್ಕೆರುವುದು ಒಂದು ಗಂಡು ಪಾತ್ರವೇ ಎಂಬುದು ಗಮನಾರ್ಹ ವಿಷಯ. ಅದಲ್ಲದೆ 'ಮುಟ್ಟಿನ' ಪರಿಕಲ್ಪನೆಯನ್ನು ವೈಚಾರಿಕವಾಗಿ ಪ್ರಶ್ನಿಸಿದ್ದ ಈ

ಪರಂಪರೆ, ಅದೇ ಮುಟ್ಟಿನಿಂದಾಗಿ ಶಿಶು ಮಗಳಾಗಿದ್ದ 'ದೊಡ್ಡ ತಾಯಮ್ಮ'ನನ್ನು ಸ್ವತಃ ಆಕೆಯ ಪತಿ ರಾಚಾಪ್ಪಾಜಿ ಆಕೆ ಮುಟ್ಟಾದಾಗ ನೀನು ತೋಪಿನಲ್ಲೆ ಇರು ಎಂದು ಮುಂದೆ ಹೋಗುತ್ತಾನೆ. ಜಗತ್ತಿನಲ್ಲಿ ಯಾವುದೇ ಸಮುದಾಯದಲ್ಲಾಗಲಿ, ಕಾವ್ಯದಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ, ಸ್ತ್ರೀಯನ್ನು ಪುರುಷಾಧೀನವಾಗಿಸಿಕೊಂಡೇ ಬರಲಾಗಿದೆ. ಅದು ಒಮ್ಮೊಮ್ಮೆ ಅಪ್ರಶ್ನಾರ್ಹವೂ ಕೂಡ ಆಗಿದೆ.

**ಕೊನೆ ಟಿಪ್ಪಣಿಗಳು:**

1. ಬೋರಲಿಂಗಯ್ಯ ಹಿ.ಚಿ. (ಸಂ), (1997), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 9
2. ಅದೇ, ಪು.ಸಂ. 32
3. ಅದೇ, ಪು.ಸಂ. 416–417
4. ಅದೇ, ಪು.ಸಂ. 425
5. ಅದೇ, ಪು.ಸಂ. 434
6. ವೆಂಕಟೇಶ ಇಂದ್ವಾಡಿ (ಸಂ), (2004), ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 226
7. ರಾಜಶೇಖರ ಪಿ.ಕೆ. (ಸಂ), (2019), ಧರೆಗೆ ದೊಡ್ಡೋರು ಮಂಟೇಸ್ವಾಮಿ, ಪು.ಸಂ. ಪ್ರಸ್ತಾವನೆ
8. ಬೋರಲಿಂಗಯ್ಯ ಹಿ.ಚಿ. (ಸಂ), (1997), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 705
9. ಅದೇ, ಪು.ಸಂ. 709
10. ವೆಂಕಟೇಶ ಇಂದ್ವಾಡಿ (ಸಂ), (2004), ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 259
11. ಬೋರಲಿಂಗಯ್ಯ ಹಿ.ಚಿ. (ಸಂ), (1997), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 754
12. ಅದೇ, ಪು.ಸಂ. 756

**ಆಕರ ಗ್ರಂಥ:**

1. ಬೋರಲಿಂಗಯ್ಯ ಹಿ.ಚಿ. (ಸಂ), (1997), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪರಾಮರ್ಶನ ಗ್ರಂಥಗಳು:**


1. ವೆಂಕಟೇಶ ಇಂದ್ವಾಡಿ (ಸಂ), (2004), ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ರಾಮಚಂದ್ರನ್ ಸಿ.ಎನ್., (2007), ಹೊಸ ಮಡಿಯ ಮೇಲೆ ಚದುರಂಗ, ಸಪ್ನ ಬುಕ್‌ಹೌಸ್, ಬೆಂಗಳೂರು.
3. ನಿಂಗಪ್ಪ ಮುದೆನೂರು, (2004), ಕನ್ನಡ ಜನಪದ ಮಹಾ ಕಾವ್ಯಗಳ ಸಾಂಸ್ಕೃತಿಕ ವೀರರು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
4. ಶಂಕರನಾರಾಯಣ ತೀ.ನಂ. (ಸಂ), (1998), ಕರ್ನಾಟಕ ಜನಪದ ಮಹಾಕಾವ್ಯಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
5. ಅಂಬಳಿಕೆ ಹಿರಿಯಣ್ಣ, (1998), ಜನಪದಮಹಾಕಾವ್ಯಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ನಾಗರಾಜ್ ಡಿ.ಆರ್., (2014), ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
7. ಮುತ್ತಯ್ಯ ಎಸ್. ಎಂ., (2023), ಜಾನಪದ ಸಂವೇದನೆ, ಜನಸ್ಪಂದನ ಟ್ರಸ್ಟ್, ಶಿಕಾರಿಪುರ.
8. ಸುರೇಶ್ ನಾಗಲಮಡಿಕೆ, (2020), ಹಾಡು ಕಲಿಸಿದ ಹರ, ದೀಪಂಕರ ಪುಸ್ತಕ, ತುಮಕೂರು.
9. ಡೊಮಿನಿಕ್ ಡಿ. ಮತ್ತುರಾಜು ಬಿ.ಎಲ್., (2017), ದಲಿತ ನೋಟ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
10. ಬೋರಲಿಂಗಯ್ಯ ಹಿ.ಚಿ., (2018), ಕರ್ನಾಟಕ ಕನ್ನಡ ಜನಪದ ಮಹಾಕಾವ್ಯ ಮೀಮಾಂಸೆ ಮತ್ತು ತಾತ್ವಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ರಂಗನಾಥ ಕಂಟನಕುಂಟೆ, (2016), ಓದಿನ ಜಾಡು, ಲಡಾಯಿ ಪ್ರಕಾಶನ ಗದಗ.
12. ರಂಗರಾಜ ವನದುರ್ಗ (ಸಂ), (2007), ಜನಪದ ಸಾಂಸ್ಕೃತಿಕ ವೀರರು, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.